**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :01.03.2025**
**ಮುಂದುವರೆದ ಪಾಟೀ ಸವಾಲು - 5 ನೇ ಪ್ರತಿವಾದಿ ಪರ ವಕೀಲರಿಂದ :**

ನನಗೆ ಕನ್ನಡ ಓದಲು ಬರುತ್ತದೆ. ನಾನು 3 ನೇ ತಗತಿ ಓದಿರುತ್ತೇನೆ. ನನ್ನ ತಂದೆ ಮರಣ ಹೊಂದಿ ಸುಮಾರು 30 ವರ್ಷ ಆಗಿದೆ. ನನ್ನ ಸಹೋದರರು ಸೇರಿ ದಾವ ಸ್ವತ್ತನ್ನು ಯಾರಿಗೆ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಸಹೋದರರು ಸೇರಿ ದಾವ ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಯಾರು ಮಾರಾಟ ಮಾಡಿದ್ದಾರೋ ಎಂದು ನನಗೆ ಗೊತ್ತಿಲ್ಲ. 1 ರಿಂದ 4 ನೇ ಪ್ರತಿವಾದಿಗಳು ಸೇರಿ ದಾವ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಆ ಬಗ್ಗೆ ನನ್ನ ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.ನಾನು ನನ್ನ ಸಹಿಯನ್ನು ಪೂರ್ಜರಿ ಮಾಡಿದ್ದಾರೆಂದು ಹೇಳಿರುತ್ತಾರೆಂದು ಹೊರತು 1 ರಿಂದ 4 ನೇ ಪ್ರತಿವಾದಿಗಳು ಮಾರಾಟ ಮಾಡಿರುವುದಿಲ್ಲ ಎಂದು ಹೇಳಿರುವುದಿಲ್ಲ ಹಾಗೂ ಆ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅವರು 1997 ರಲ್ಲಿ ಮಾರಾಟ ಮಾಡಿರುತ್ತಾರೆ. ನಾನು ಸದರಿ ಪತ್ರವನ್ನು ನೋಡಿರುವುದಿಲ್ಲ ಹಾಗೂ ಅದಕ್ಕೆ ಯಾರು ಸಹಿ ಮಾಡಿರುತ್ತಾರೆ ಮತ್ತು ಸಾಕ್ಷಿದಾರರು ಆಗಿರುತ್ತಾರೆಂದು ನಾನು ನೋಡಿರುವುದಿಲ್ಲ. ನನ್ನ ಸಹಿ ಇಲ್ಲದೇ ಮಾರಾಟ ಮಾಡಿರುತ್ತಾರೆಂಬ ವಿಚಾರ 2023 ರಲ್ಲಿ ಗೊತ್ತಾಯಿತು. ನಾನು ನನ್ನ ಅಣ್ಣನ ಬಳಿ ಭಾಗ ಕೇಳಿದ್ದಾಗ ಅವರು ದಾವ ಸ್ವತ್ತನ್ನು ಮಾರಾಟ ಮಾಡಿರುವುದಾಗಿ ತಿಳಿಸಿದ್ದು, ಆಗ ನನ್ನ ಸಹಿ ಪಡೆಯದೇ ಮಾರಾಟ ಮಾಡಿರುವುದು ತಿಳಿದು ಬಂತು. ನನಗೆ ಮಾರಾಟ ಮಾಡಿರುವುದೇ ಗೊತ್ತಿಲ್ಲ. ಈಗಲೂ ಸಹ 5 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಸ್ವಾದೀನದಲ್ಲಿದ್ದಾರೆಂದರೆ ಸರಿಯಲ್ಲ. ನಾವೇ ಸ್ವಾದೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನಾವು ಸ್ವಾದೀನದಲ್ಲಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ಪಹಣಿ ಮತ್ತು ಮ್ಯುಟೇಷನ್ ರಿಜಿಸ್ಟರ್ ಹಾಜರುಪಡಿಸಿರುತ್ತೇನೆ. ಈಗ ಕಂದಾಯ ದಾಖಲೆಗಳು ನಮ್ಮ ಹೆಸರಿನಲ್ಲಿ ಇಲ್ಲ. ಬೋಗಸ್ ದಾಖಲೆ ಮಾಡಿರುತ್ತಾರೆಂದು ನುಡಿಯುತ್ತಾರೆ. ನಾನು ಈ ದಾವೆ ಸಲ್ಲಿಸಿರುವ ಬಗ್ಗೆ 1 ರಿಂದ 3 ನೇ ಪ್ರತಿವಾದಿಗಳಿಗೆ ತಿಳಿಸಿರುವುದಿಲ್ಲ. ನಾನು ಮತ್ತು ಸಹೋದರರ ಮನೆಗಳು ಸುಮಾರು 50 ಅಡಿ ದೂರದಲ್ಲಿವೆ. ಈಗ ನನ್ನ ಮತ್ತು ನನ್ನ ಸಹೋದರರ ಸಂಬಂಧ ಚೆನ್ನಾಗಿಲ್ಲ. ನನ್ನ ಸಹೋದರರ ವಿರುದ್ಧ ಆಸ್ತಿ ಮಾರಾಟ ಮಾಡಿರುವ ಕುರಿತು ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ನಾನು ಮತ್ತು ನನ್ನ ಸಹೋದರರು ಸೇರಿ ದಾವಾಸ್ತಿಯ ಬೆಲೆ ಜಾಸ್ತಿ ಆಗಿರುವುದರಿಂದ 5 ನೇ ಪ್ರತಿವಾದಿಯಿಂದ ಹಣ ಪಡೆಯಲು ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ತಿಯ ಬೆಲೆ 1 ಎಕರೆಗೆ ಈಗ ಸುಮಾರು 4 ಕೋಟಿ ಇರಬಹುದು. 5 ನೇ ಪ್ರತಿವಾದಿ ಚಿಕಿತ್ಸೆಗೆ ಹಣ

ಹೊಂದಿಸಲು ದಾವ ಸ್ವತ್ತನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದಾಗ ನನಗೆ ಆ ಬಗ್ಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆ ಬಗ್ಗೆ 5 ನೇ ಪ್ರತಿವಾದಿ ಬೇರೆಯವರಿಗೆ 10 ಸಾವಿರ ರೂಪಾಯಿ ಹಣ ಪಡೆದು ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ನನ್ನ ಸಹೋದರರು ಹೆಚ್ಚಿನ ಹಣವನ್ನು ಕೊಡದೇ ಇದ್ದರೇ ನಿಮ್ಮ ವಿರುದ್ಧ ಸುಳ್ಳು ದಾವೆ ಸಲ್ಲಿಸುತ್ತೇವೆಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಿಂದ ತಡಾಜ್ಞೆ ಪಡೆಯುತ್ತೇನೆಂದು 5 ನೇ ಪ್ರತಿವಾದಿಗೆ ಬೆದರಿಕೆ ಹಾಕಿದ್ದೇವೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 2022 ರಲ್ಲಿ 5 ನೇ ಪ್ರತಿವಾದಿ ಕಾರ್ಮಿಕರನ್ನು ಮತ್ತು ಬುಲ್ಡೋಜರ್ ತಂದು ದಾವ ಸ್ವತ್ತಿನಲ್ಲಿ ಗಲಾಟೆ ಮಾಡಿರುತ್ತಾರೆಂದು ನಾನು ಹೇಳಿರುವುದಿಲ್ಲ. 5 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮತ್ತು ಪಹಣಿ ಬದಲಾವಣೆ ಆಗಿರುವುದನ್ನು ಪ್ರಶ್ನಿಸಿ ಕಂದಾಯಧಿಕಾರಿಗಳ ಎದುರು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಆ ಬಗ್ಗೆ ಪ್ರಶ್ನಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತೇನೆ. ನನಗೆ ಆ ಬಗ್ಗೆ ಮೊದಲೇ ಮಾಹಿತಿ ಇದ್ದು, 2023 ರಲ್ಲಿ ಗೊತ್ತಾಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು 1993 ರಿಂದ ದಾವ ಸ್ವತ್ತಿನ ಕಂದಾಯ ದಾಖಲೆಗಳನ್ನು ನೋಡಿರುವುದಿಲ್ಲ. ಅದನ್ನು ನಮ್ಮ ಅಣ್ಣ 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತೇನೆ. ನನಗೆ 2023 ಕ್ಕಿಂತ ಪೂರ್ವದಲ್ಲಿ ಭಾಗ ಕೇಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಈಗ ನನ್ನ ಮಕ್ಕಳ ಮದುವೆಗಾಗಿ ಭಾಗ ಕೇಳಿದ್ದೇನೆ ಎಂದು ನುಡಿಯುತ್ತೇನೆ. ನಿಪಿ-4 ಕ್ರಯ ಪತ್ರದಲ್ಲಿ ಯಾರದು ಸಹಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ರಲ್ಲಿ ಯಾರು ನನ್ನ ಸಹಿಯನ್ನು ಪೂರ್ಜರಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ನನ್ನ ಸಹಿ ಇದೆಯೇ ಇಲ್ಲಯೋ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆ ನೊಂದಣಿ ಆಗಿರುವುದು ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ..**